ಡಾ|| ಹೆಗ್ಗಪ್ಪ ಲಮಾಣಿ.--ಮಾನ್ಯ ಮಂತ್ರಿಗಳು 146 ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲ್ ಸಂಖ್ಯೆ ಖಾಲಿ ಇದೆ ಅಂತ ಹೇಳಿದರು. ಹಾಗಾದರೆ ರಾಜ್ಯದಲ್ಲಿ ಒಟ್ಟು ಜೂನಿಯರ್ ಕಾಲೇಜುಗಳು ಎಷ್ಟು ಇದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.--ಅದು ಪ್ರತ್ಯೇಕ ಪ್ರಶ್ನೆಯಾಯಿತು.

ಉಪಾಧ್ಯಕ್ಷರು.—ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ

ಶ್ರೀ ವಿ. ಶ್ರೀನಿವಾಸನ್ (ಯಲಹಂಕ).--ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಗಳ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಇದನ್ನು ನೀಗಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ;

ಇ) ಈ ತಾಲ್ಲೂಕಿಗೆ ಕೊಳವೆ ಬಾವಿಗಳಿಗಾಗಿ ಹೆಚ್ಚಿನ ಹಣ ಒದಗಿಸಲಾಗುವುದೆ ;

ಈ) ಕೊಳವೆ ಬಾವಿಗಳನ್ನು ತೆಗೆಯಲು ಸರ್ಕಾರದವರ ಜರೂರು ಕ್ರಮಗಳೇನು ;

ಉ) ಬೆಂಗಳೂರು ಜಲ ಮಂಡಲಿಯವರ ಮೂಲಕ ಈ ತಾಲ್ಲೂಕಿನಲ್ಲಿ ಕಾವೇರಿ ನೀರು ಹರಿಯುವ ಆಕ್ಕ ಪಕ್ಕದ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಲು ಸೂಕ್ತ ವ್ಯವಸ್ಥೆ ಮಾಡಲಾಗುವುದೇ ;

ಊ) ಹೆಬ್ಬಾಳದ ಆನಂದಗಿರಿ ಬೆಟ್ಟದ ಮೇಲೆ ಕಾವೇರಿ ನೀರು ಟ್ಯಾಂಕನ್ನು ನಿರ್ಮಿಸಿ ಆಕ್ಕ ಪಕ್ಕದ ಹಳ್ಳಿಗೆ ಕುಡಿಯುವ ನೀರಿನ ಸೌಕರ್ಯವನ್ನು 1983ರ ಅವಧಿಯಲ್ಲಿ ಪೂರ್ಣಗೊಳಿಸುವಿರಾ; ಪೂರ್ಣಗೊಳಿಸದ್ದಲ್ಲಿ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರಿನ ಬವಣೆ ನಿಲ್ಲುತ್ತದೆ. ಹಾಗಾದರೆ ಎಂದು ಪೂರ್ಣಗೊಳಿಸುವಿರಿ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು).—

ಅ) ಹೌದು

ಆ) ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ 1982-83ರ ಸಾಲಿನಲ್ಲಿ 50 ಗ್ರಾಮಗಳನ್ನು ಅಭಾವ ಪೀಡಿತ ಗ್ರಾಮಗಳೆಂದು ಗುರುತಿಸಲಾಗಿದ್ದು ಕೊಳವೆ ಬಾವಿಗಳನ್ನು ತೆಗೆಸಲು ಆದೇಶ ನೀಡಲಾಗಿದೆ. ಅವುಗಳಲ್ಲಿ ಈಗಾಗಲೇ 9 ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಉಳಿದ ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ತೆಗೆಸಲು 2 ಕೊರೆಯುವ ಯಂತ್ರಗಳು ತುರ್ತಾಗಿ ಕಾರ್ಯ ನಿರ್ವಹಿಸುತ್ತಿವೆ.

ಇ) ಹೌದು.

ಈ) "ಆ" ಪ್ರಶ್ನೆಗೆ ಕೊಟ್ಟ ಉತ್ತರವನ್ನು ನೋಡುವುದು.

ಉ) ಇಲ್ಲ.

ಊ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ವಿ. ಶ್ರೀನಿವಾಸನ್.—ನನ್ನ ಕ್ಷೇತ್ರದಲ್ಲಿ ಕಾವೇರಿ ನೀರಿನ ಪೈಪು ಹೋಗಿರುವುದರಿಂದ ಇದರ ಮೂಲಕ ಸಂಬಂಧಪಟ್ಟ ಹಳ್ಳಿಗಳಿಗೆ ನೀರನ್ನು ಒದಗಿಸಬೇಕೆಂದು ನಾನು ಖುದ್ದಾಗಿ ಜಲಮಂಡಳಿಯ ಅಧಿಕಾರಿಗಳನ್ನು ಭೇಟಿ ಮಾಡಿ ತಿಳಿಸಿದ್ದೇನೆ. ಇದರ ಬಗ್ಗೆ ನಾನು ಸಂಬಂಧ ಪಟ್ಟ ಮಂತ್ರಿಗಳಿಗೂ ಪತ್ರವನ್ನು ಬರೆದಿದ್ದೇನೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸೂಕ್ತ ಗಮನ ಹರಿಸುತ್ತಾರೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದೇನೆ. ಕಾವೇರಿ ನೀರು ಹರಿಯತಕ್ಕ ಗ್ರಾಮಗಳಿಗೆ ನೀರು ಕೊಡಬೇಕು ಎಂದು ಕೇಳುತ್ತಿದ್ದಾರೆ. ಇದು ನನ್ನ ಖಾತೆಗೆ ಸಂಬಂಧಪಟ್ಟದ್ದಲ್ಲ. ಇದು ಜಲಮಂಡಳಿಗೆ ಬರುತ್ತದೆ ಅವರಲ್ಲಿ ಇಂಥ ಯೋಜನೆ ಯಾವುದೂ ಇಲ್ಲವೆಂದು ಕಾಣುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ನನ್ನ ಕ್ಷೇತ್ರದಲ್ಲಿಯೂ ಬರುತ್ತದೆ. ಇದರಲ್ಲಿ ಕೆಲವು ಪ್ರದೇಶಗಳು ಬಿ ಡಿ ಎ ಗೆ ಸೇರಿವೆ. ಇದು ರೂರಲ್ ಪ್ಲಸ್ ಜಿಲ್ಲಾ, ಏರಿಯಾ ಬಿ. ಡಿ. ಎ. ಗೆ ಸೇರಿದಂಥ ಕಡೆಗಳಲ್ಲಿ ಕಾವೇರಿ ನೀರನ್ನು ಒದಗಿಸುವ ಯೋಜನೆಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಈ ಪ್ರಶ್ನೆ ನನಗೆ ಸಂಬಂಧಪಟ್ಟದ್ದಲ್ಲ. ಮಾನ್ಯ ಸದಸ್ಯರು ಪ್ರಶ್ನೆ ಸಂಖ್ಯೆ 112 (75) ಬೇರೆ ಪ್ರಶ್ನೆಯನ್ನು ಹಾಕಿದರೆ ಉತ್ತರ ಕೊಡುತ್ತೇನೆ.

ಅಬ್ದುಲ್‌ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಉತ್ತರಗಳು ಬೆಳಗ್ಗೆ ಬಂದಿವೆ. ಇದರ ಬಗ್ಗೆ ಚರ್ಚೆಯನ್ನು ತಡೆ ಹಿಡಿದರೆ ಒಳ್ಳೆಯದು.

ಉಪಸಭಾಧ್ಯಕ್ಷರು.—ಆಗಬಹುದು.

Providing building to the Government Composite Junior College Chitaguppa, Humnabad Taluk.

113 Sri Basavaraj Patil (Humnabad).— Will the Minister for Education be pleased to state :—

(a) whether it has come to the notice of the Government that there is no school building to the students who are studying in the Government Composite Junior College, Chitaguppa city, Humnabad Taluk ;

(b) if so, the action taken by Government for the construction of the building ?

ಶ್ರೀ ಬಿ. ರಾಚಯ್ಯ (ಮಾನ್ಯ ವಿದ್ಯಾ ಮಂತ್ರಿಗಳು).—

ಅ) ಬಂದಿದೆ.

ಆ) ಆರ್ಥಿಕ ಅಡಚಣೆಯಿಂದ ಹೊಸ ಕಟ್ಟಡ ನಿರ್ಮಿಸಲು ಸಾಧ್ಯವಾಗಿಲ್ಲ. ಆದರೂ ಈ ಕಟ್ಟಡದ ದುರಸ್ತಿಯನ್ನು ತೆಗೆದುಕೊಂಡಿದ್ದು ಸಧ್ಯದಲ್ಲಿಯೇ ಇದು ಮುಗಿಯಲಿದೆ.

ಶ್ರೀ ಬಸವರಾಜ ಪಾಟೀಲ್.—ಹುಮ್ನಾಬಾದ ತಾಲೂಕಿನ ಚಿಟಗುಪ್ಪ ನಗರದಲ್ಲಿ ಶಾಲಾ ಕಟ್ಟಡಗಳ ಕೊರತೆ ಇದೆ ಅಲ್ಲಿ ಮಕ್ಕಳಿಗೆ ಕೂತುಕೊಳ್ಳುವುದಕ್ಕೂ ಜಾಗ ಇಲ್ಲ ಕುದುರೆಗಳನ್ನು ಕಟ್ಟತಕ್ಕ ಜಾಗದಲ್ಲಿ ಇಲ್ಲವೆ ಮಠಗಳಲ್ಲಿ ಎಲ್ಲಾ ದರೂ ಒಂದು ಕಡೆ ಸ್ಕೂಲುಗಳನ್ನು ಮಾಡುತ್ತಿದ್ದಾರೆ. ಕೆಲವರು ಎಸ್ಟೇಸಿಷ್ಟಂನಲ್ಲಿ ಶಾಲೆಗಳನ್ನು ನಡೆಸಿದ್ದರೂ ಕೂಡ ಜಾಗದ ಪ್ರಶ್ನೆಯಿದೆ, ಆದಕ್ಕಾಗಿ ಸರ್ಕಾರದವರು ಅಲ್ಲಿ ಹೊಸ ಕಟ್ಟಡಗಳನ್ನೇ ಕಟ್ಟುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ?

ಶ್ರೀ ಬಿ. ರಾಚಯ್ಯ.—ಪ್ರಾಥಮಿಕ ಶಾಲೆಗಳ ಕಟ್ಟಡಗಳಲ್ಲಿ ಪ್ರೌಢಶಾಲೆಗಳು ಜೂನಿಯರ್ ಕಾಲೇಜುಗಳು ನಡೆದುಕೊಂಡು ಬರುತ್ತಿವೆ. ಕಾಲೇಜುಗಳನ್ನು ಕೇಳತಕ್ಕವರು ಹೈಸ್ಕೂಲುಗಳನ್ನು ಕೇಳತಕ್ಕವರು ಬೇರೆ ಬೇರೆ ಜಾಗಗಳನ್ನು ವ್ಯವಸ್ಥೆ ಮಾಡಿಕೊಂಡು ಸರ್ಕಾರದ ಪರವಾಣಿಗೆಯನ್ನು ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಈಗ ನಾವು ಬೇರೆ ಕಟ್ಟಡಗಳನ್ನು ಕಟ್ಟಸಬೇಕಾದರೆ ನಮಗೆ ಅಲ್ಲಿ ಇನ್ನೂ ಸರಿಯಾದ ಸ್ಥಳದೊರೆತಿಲ್ಲ ಸರಿಯಾದ ಸ್ಥಳವನ್ನು ಒದಗಿಸಿಕೂಡುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇವೆ.

ಶ್ರೀ ಬಸವರಾಜಪಾಟೀಲ್.— ನಮ್ಮ ಭಾಗ ರಾಜ್ಯದಲ್ಲಿ ಬಹಳ ಹಿಂದುಳಿದ ಪ್ರದೇಶ. ಆದ್ದರಿಂದ ತಾವು ಇದನ್ನು ಗಮನದಲ್ಲಿಟ್ಟುಕೊಂಡು ಏನಾದರೂ ವಿಶೇಷವಾಗಿ ಗ್ರಾಂಟಿನ್ನು ಒದಗಿಸಿ ಶಾಲಾ ಕಟ್ಟಡಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿರಾ ? ನಾನು ಕೇಳಿದ ಚಿಟಗುಪ್ಪ ನಗರ ಒಂದೇ ಅಲ್ಲ ನಮ್ಮ ತಾಲ್ಲೂಕಿನಲ್ಲಿ ಕೆಲವಾರು ಸ್ಥಳಗಳಲ್ಲಿ ಇದೇ ಪರಿಸ್ಥಿತಿ ಇದೆ. ಕೆಲವರು ಗಿಡದ ಕೆಳಗೆ ಪಾಠಶಾಲೆಗಳನ್ನು ಮಾಡುತ್ತಿದ್ದಾರೆ. ಎನ್ ಆರ್ ಇ ಪಿ ಯಲ್ಲಿ ಎಲ್ಲೆಲ್ಲಿ ಕಟ್ಟಡಗಳನ್ನು ಕಟ್ಟಲಿಕ್ಕೆ ಹಣ ಒದಗಿಸುತ್ತಿದಾರೋ ಅಲ್ಲಲ್ಲಿ ವಿಶೇಷ ಧನಸಹಾಯ ಮಾಡಿ ಕಟ್ಟಡಗಳನ್ನು ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ ರಾಚಯ್ಯ.— ಈ ವರ್ಷದ ಆಯವ್ಯಯ ಪತ್ರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಪ್ರಾಥಮಿಕ ಶಾಲೆಗಳಿಗೆ ಒದಗಿಸಿದ್ದಾರೆ. ಈ ಪ್ರಾಥಮಿಕ ಶಾಲೆಗಳನ್ನು ಮುನಿಸಿಪಾಲಿಟಿಯವರೆ ಕಟ್ಟಿಕೊಳ್ಳಿ ಎನ್ನುವ ತೀರ್ಮಾನ ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈಗ ನಾವು ಈ ವಿಷಯಕ್ಕೆ ಹೊಸದಾಗಿ ಪ್ರಯತ್ನ ಮಾಡಬೇಕಾಗಿದೆ ಇದಕ್ಕೆ ನಮಗೆ ಕಾಲಾವಕಾಶ ಬೇಕು.

ರಾಜ್ಯದ ಕೋಳಿ ಸಾಕಾಣಿಕೆಯ ಬಗ್ಗೆ

114 ಹೆಚ್. ಜಿ. ಚನ್ನಪ್ಪನವರು (ನಾಗಡಿ). — ಮಾನ್ಯ ಪಶು ಸಂಗೋಪನೆ, ಪಶು ವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಕಳೆದ ಹಲವಾರು ವರ್ಷಗಳಿಂದಲೂ ರಾಜ್ಯದಲ್ಲಿ ಕೋಳಿ ಸಾಕಾಣಿಕೆ ಉದ್ಯಮವು ಆತಂಕದಾಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ರಾಜ್ಯದ 1983-84ನೇ ಸಾಲಿನ ಆಯವ್ಯಯದಲ್ಲಿ ಈ ಉದ್ದಿಮೆಯನ್ನು ಉತ್ತಮ ಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ವಿಶ್ವನಾಥರೆಡ್ಡಿ ಪಶು ಸಂಗೋಪನೆ, ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು.—

ಅ) ಹೌದು.

ಆ) ರಾಜ್ಯದ ಕೋಳಿ ಉದ್ದಿಮೆದಾರರ ತೊಂದರೆಗಳನ್ನು ನಿವಾರಿಸಲು ಈ ಕೆಳಕಂಡ ಅಂಶಗಳು ಸರಕಾರದ ಪರಿಶೀಲನೆಯಲ್ಲಿವೆ:—

1) ರಾಜ್ಯ ನುಟ್ಟಿದ ಕೋಳಿ ಉತ್ಪಾದಕರ ಸಂಯುಕ್ತ ಸಹಕಾರ ಮಾರುಕಟ್ಟೆ ನಿಗಮವನ್ನು ಸ್ಥಾಪಿಸುವ ಬಗ್ಗೆ.

2) ಕೋಳಿಮರಿ ಉತ್ಪಾದನೆ ಮಾಡುವ ದಿಸೆಯಲ್ಲಿ ಖಾಸಗಿಯವರು ಸರ್ಕಾರದಲ್ಲಿ ನೊಂದಣಿ ಮಾಡುವ ಬಗ್ಗೆ.